

ಯಶಸ್ವಿಯಾದರು. ಇಸ್ರೇಲ್ ಅಧ್ಯಕ್ಷ ಐಸ್ಯಾಕ್ ಹರ್‌ಜೋಗ್ ತಮ್ಮ ಭಾಷಣಗಳಿಗೆ ಚಾಟ್ ಜಿಪಿಟಿ ನೆರವು ಪಡೆಯುತ್ತಾರೆ.

ಭಾರತದ ನ್ಯಾಯಾಲಯಗಳಲ್ಲಿ ಪ್ರತಿ ನಿಮಿಷಕ್ಕೆ 23 ಹೊಸ ಮೊಕದ್ದಮೆಗಳು ದಾಖಲಾಗುತ್ತಿವೆ. ಒಂದು ಅಂಕಿಅಂಶದಂತೆ 60 ಲಕ್ಷ ಮೊಕದ್ದಮೆಗಳು ಬಾಕಿ ಇವೆ. ಕೆಲವು ತಜ್ಞರು ಚಾಟ್ ಜಿಪಿಟಿ ಬಳಸಿದರೆ ಭಾರತದ ನ್ಯಾಯಾಲಯಗಳ ಕೆಲಸ ಹಗುರವಾಗಬಹುದೇನೋ?

## ದಿನನಿತ್ಯದ ಬಳಕೆಯಲ್ಲಿ ಯಾಂಬು

ಯಾಂಬು ಬಳಕೆಯಿಂದ ಅಗಾಧ ಸಮಯ ಉಳಿಯುತ್ತದೆ ಎಂಬುದು ನಿಜವಾದರೂ ಖರ್ಚು ಹೆಚ್ಚೇ ಇರುತ್ತದೆ. ಬಳಕೆ ಹೆಚ್ಚಾದಷ್ಟೂ ನೈತಿಕ–ಸಾಮಾಜಿಕ–ಕಾನೂನಿನ ಅಪಾಯಗಳೂ ಎದುರಾಗುತ್ತಿವೆ. ಅಂಥ ಕೆಲವು ಸಾಧ್ಯತೆಗಳು ಇಲ್ಲಿವೆ.

### 1. ಮುಖಚಹರೆ ಗುರುತು

ಐದು ವರ್ಷಗಳ ಹಿಂದೆ ಖರೀದಿಸಿ ಉಪಯೋಗಿಸುತ್ತಿದ್ದ ಮೊಬೈಲುಗಳನ್ನು ತೆರೆಯಲು ಯಾವುದಾದರೊಂದು ಸಂಖ್ಯೆ ಅಥವಾ ಪ್ಯಾಟರ್ನ್ (ನಮೂನೆ) ಬಳಸಲಾಗುತ್ತಿತ್ತು. ನಂತರ ಬೆರಳಚ್ಚು ಗುರುತಿನಿಂದ ಸ್ಕ್ರೀನ್ ತೆರೆಯುವ ವಿಧಾನ ಬಂತು. ಈಗ 'ಫೇಸ್ ರಿಕಗ್ನಿಷನ್', ಅಂದರೆ ವ್ಯಕ್ತಿಯ ಮುಖ ಮೊಬೈಲ್ ಸ್ಕ್ರೀನ್ ಎದುರಿಗೆ ಬಂದರೆ ಸಾಕು ಮೊಬೈಲ್ ತೆರೆದುಕೊಳ್ಳುತ್ತದೆ. ಈ ತಂತ್ರಜ್ಞಾನದ ವ್ಯಾಪಕ ಬಳಕೆ ಎಲ್ಲ ಕಡೆ ಇದೆ. ಇದಷ್ಟೇ ಅಲ್ಲ. ಸಾರ್ವಜನಿಕ ರಸ್ತೆ, ಪಾರ್ಕು, ಸರ್ಕಲ್‌ಗಳಲ್ಲಿ ಓಡಾಡುವ ನಿಮ್ಮನ್ನು ಗುರುತಿಸಲು ಸಿಸಿ ಕ್ಯಾಮೆರಾ ಬಳಸಲಾಗುತ್ತದೆ. ನಿಮ್ಮ ಚಿತ್ರ ಮಸುಕಾಗಿದ್ದರೂ ಸಹ 'ಯಾಂಬು' ಸಹಾಯದಿಂದ ಅದನ್ನು ಸ್ಪಷ್ಟಗೊಳಿಸಿ, ಅದು ನೀವೇ ಎಂದು ನಿಖರವಾಗಿ ಹೇಳಬಹುದು. ಇಲ್ಲೊಂದು ನೈತಿಕ ಪ್ರಶ್ನೆ ಏಳುತ್ತದೆ. ಯಾವುದೇ ಅಪರಾಧ ಮಾಡದ, ಸುಮ್ಮನೆ ನಿಮ್ಮ ಪಾಡಿಗೆ ನೀವು ಇರುವಾಗ ನಿಮ್ಮ ಚಲನವಲನಗಳ ಮೇಲೆ ಕಣ್ಣಿಡುವುದೂ ಅಲ್ಲದೆ, ಅದು ನೀವೇ ಎಂದು ಗುರುತಿಸುವುದು ಖಾಸಗೀತನವನ್ನು ಭಂಗ ಮಾಡಿದಂತಾಗುವುದಲ್ಲವೆ? ಇದು ವೈಯಕ್ತಿಕ ಸ್ವಾತಂತ್ರ್ಯದ, ಗೌಪ್ಯತೆಯ ಪ್ರಶ್ನೆಯಲ್ಲವೇ? ಸಿಗ್ನಲ್ ಜಂಪ್, ಅಪಘಾತ, ಕೊರಳ ಚೈನು ಕದ್ದೋಡುವವರನ್ನು ಹಿಡಿಯಲು ಅದು ಸಹಾಯ ಮಾಡುತ್ತದೆ. ಅದನ್ನು ತಡೆಯಲು ಸಾಧ್ಯವೆ? ಎನ್ನುವವರ ಪ್ರಶ್ನೆಗಳಿಗೆ ಸಮಾಧಾನಕರ ಉತ್ತರಗಳಿವೆಯೇ ಹೊರತು ತಡೆದೇ ತೀರುತ್ತೇವೆ ಎನ್ನಲಾಗದು.

### 2. ಲೈಂಗಿಕ ರೋಬಾಟು / ಸೆಕ್ಸ್ ಬಾಟ್‌ಗಳು

ಲೈಂಗಿಕ ರೋಬಾಟುಗಳಿನ್ನೂ ಭೌತಿಕ ಜಗತ್ತಿಗೆ ಕಾಲಿಟ್ಟಿಲ್ಲ. ಆದರೆ ಯಾಂಬು ಆಧಾರಿತ ಆಟಿಕೆಗಳು ಒಂದೊಂದಾಗಿ ಮಾರುಕಟ್ಟೆ ಪ್ರವೇಶಿಸುತ್ತಿವೆ. ಇವುಗಳ ಉತ್ಪಾದಕರು ಹೇಳುವಂತೆ, ಈ ಸೆಕ್ಸ್‌ಬಾಟ್‌ಗಳು ಉಪಯೋಗಿಸುವವರ ಮನಸ್ಸಿಗೆ ಸಾಂತ್ವನ ಹೇಳುವ ಕೆಲಸ ಮಾಡುತ್ತು, ಲೈಂಗಿಕ ಆನಂದ ಪಡೆಯಲು 'ಹೀಗೆ ಹೀಗೆ ಮಾಡಿ' ಎಂದು ನಿರ್ದೇಶನ ನೀಡುತ್ತಾ ಸಾಗುತ್ತವೆ. ಇದರಿಂದಾಗಿ ಋಣಾತ್ಮಕ ವಿಚಾರಗಳು ದೂರವಾಗುತ್ತವೆ, ಗ್ರಾಹಕರು ತಾವಿದ್ದ ಜಾಗದಲ್ಲಿಯೇ ಇರುತ್ತಾರೆ, ಇತರರನ್ನು ಲೈಂಗಿಕವಾಗಿ ಶೋಷಿಸುವುದಿಲ್ಲ.

ಲೈಂಗಿಕ ಅಗತ್ಯಗಳಿರುವ ಪುರುಷ ಮಹಿಳೆಯರು ತಮ್ಮದೇ ಖಾಸಗಿ ಪರಿಧಿಯಲ್ಲಿ ಆನಂದ ಪಡೆಯಬಹುದು ಎಂಬುದು ಇವುಗಳನ್ನು ನಿರ್ಮಿಸಿದವರ ವಾದ ಮತ್ತು ಮಾತು. ಇದಕ್ಕೆ ಯಾವುದೇ ವೈಜ್ಞಾನಿಕ ಆಧಾರ ಇಲ್ಲ ಎಂದಿರುವ ಲಂಡನ್‌ನ 'ಸೇಂಟ್ ಜಾರ್ಜ್ ಯುನಿವರ್ಸಿಟಿ ಹಾಸ್ಪಿಟಲ್' ಮತ್ತು ಕಿಂಗ್ಸ್ ಕಾಲೇಜಿನ ತಜ್ಞ ವೈದ್ಯರು, 'ಈ ಚಾಟ್‌ಬಾಟ್‌ಗಳು ದಾರಿಯಲ್ಲಿ ಹೋಗುವ ಮಹಿಳೆ–ಪುರುಷರನ್ನು ರೇಪ್ ಮಾಡು ಎಂದು ಸಲಹೆ ಸೂಚಿಸಿದರೆ ಗತಿ ಏನು?' ಎಂದು ಪ್ರಶ್ನಿಸುತ್ತಾರೆ ಮತ್ತು ಇವು ಅತ್ಯಾಚಾರವನ್ನು ಸಾಮಾನ್ಯಗೊಳಿಸುವ ಅಪಾಯವೂ ಇದೆ ಎನ್ನುತ್ತಾರೆ. ಈ ಸೆಕ್ಸ್ ರೋಬಾಟುಗಳು ಖಾಸಗೀತನ ಮತ್ತು ಅನಾಮಿಕತೆಯನ್ನು ಬಯಲುಗೊಳಿಸಿದರೆ ಸೈಬರ್ ಅಪರಾಧ, ಬ್ಲ್ಯಾಕ್‌ಮೇಲ್‌ಗಳು ಹೆಚ್ಚಲೂಬಹುದು.

### 3. ಆನ್‌ಲೈನ್ ವೈಯಕ್ತಿಕ ಖರೀದಿ

ನಿಮಗೆ ಮುಂದಿನ ವಾರದ ಪದವಿ ಪ್ರದಾನ ಸಮಾರಂಭಕ್ಕೆ ಹಾಜರಾಗಲು 'ಗ್ರಾಜುಯೇಟ್ ಗೌನ್' ಬೇಕೆಂದು ಅಮೆಜಾನ್‌ನ ಆನ್‌ಲೈನ್ ಶಾಪಿಂಗ್‌ಗೆ ಹೇಗೆ ತಿಳಿಯುತ್ತದೆ? ನಿಮಗೆ ಬೇಕಾದ ವಸ್ತು, ಪೋಷಕರು, ಮಾಹಿತಿಯನ್ನು ಅಂತರ್ಜಾಲದಲ್ಲಿ ಹುಡುಕಿರುತ್ತೀರಿ. ಅಂತರ್ಜಾಲದಲ್ಲಿ ಸಕ್ರಿಯವಾಗಿರುವ ವಿವಿಧ ಎಐ ಆಧಾರಿತ ಆ್ಯಪ್‌ಗಳು ನೀವು ಹುಡುಕಿರುವುದನ್ನು ಪತ್ತೆ ಮಾಡಿ 'ನಿಮಗೇನು ಬೇಕು?' ಎಂದು ನಿಮ್ಮ ಮೊಬೈಲಿಗೆ, ಇ–ಮೇಲ್‌ಗೆ ಸಂದೇಶ ಕಳಿಸಲು ಶುರುಮಾಡುತ್ತದೆ. ನೀವು ಒಂದು ಬಣ್ಣದ, ವಿನ್ಯಾಸದ ಶರ್ಟ್ ಹುಡುಕಿದ್ದರೆ, ಅದೇ ಬಗೆಯ ನೂರಾರು ಶರ್ಟ್‌ಗಳ ಬಗೆಗಿನ ಚಿತ್ರ–ಮಾಹಿತಿಗಳು ನಿಮ್ಮೆದುರಿಗೆ ಬರುತ್ತದೆ. ಇದು ಯಾಂತ್ರಿಕ ಬುದ್ಧಿಮತ್ತೆಯ ಕರಾಮತ್ತು. ಇದನ್ನು ನಾವು ದಿನನಿತ್ಯ ಕಾಣುತ್ತೇವೆ.

### 4. ಡಿಜಿಟಲ್ ವಾಯ್ಸ್ ಅಸಿಸ್ಟೆಂಟ್‌ಗಳು

ಮಾರುಕಟ್ಟೆಯಲ್ಲಿರುವ ಸ್ಮಾರ್ಟ್ ಫೋನ್‌ಗಳಲ್ಲೆಲ್ಲಾ ನಮ್ಮ ಪ್ರಶ್ನೆ, ಹುಡುಕಾಟಗಳನ್ನು ಗ್ರಹಿಸಿ ಧ್ವನಿರೂಪದಲ್ಲೇ ಉತ್ತರ ಕೊಡುವ ವ್ಯವಸ್ಥೆಯನ್ನು 'ಡಿಜಿಟಲ್ ವಾಯ್ಸ್ ಅಸಿಸ್ಟೆನ್ಸ್' ಅನ್ನುತ್ತಾರೆ. ಕೇಳುಗನ ಪ್ರಶ್ನೆಗಳನ್ನು ಅರ್ಥಮಾಡಿಕೊಂಡು ಅದಕ್ಕೆ ತಕ್ಕುದಾದ ಉತ್ತರ ನೀಡುವ ವಾಯ್ಸ್ ಅಸಿಸ್ಟೆಂಟ್‌ಗಳಿಗೆ ಭಾರೀ ಬೇಡಿಕೆ ಇದೆ. ಐಟಿ ಆಧಾರಿತ ಗೃಹ ಆಫೀಸ್‌ಗಳಲ್ಲಿ ನಾವು ನೀಡುವ ಆದೇಶ ಕೇಳಿಸಿಕೊಂಡು ಫ್ಯಾನ್ ಆನ್–ಆಫ್ ಮಾಡುವ, ರೇಡಿಯೊ ಆನ್–ಆಫ್ ಮಾಡುವ, ರೈಲು–ವಿಮಾನದ ಟಿಕೆಟ್ ಬುಕ್ ಮಾಡುವ ಹಾಗೂ ಪ್ರೀತಿಪಾತ್ರರಿಗೆ ಸಂದೇಶ ಕಳಿಸುವ ಬಾಟ್‌ಗಳಿವೆ. ಮನೆಯ ಸುತ್ತಲಿನ ಕಾಫಿಶಾಪ್ ವಿವರಗಳಿರುವ ಪಟ್ಟಿ ನಮ್ಮ ಮೊಬೈಲ್ ಅಥವಾ ಕಂಪ್ಯೂಟರ್ ತೆರೆಯ ಮೇಲೆ ಮೂಡಿರುತ್ತದೆ. ಆದರೆ ಇವು ಸುರಕ್ಷಿತ ಅಲ್ಲ ಎನ್ನುವ ಮಾತಿದೆ. ಅದಕ್ಕೆ ಕಾರಣಗಳೂ ಇವೆ. ಕಳೆದ ವರ್ಷ ಪ್ರತಿಷ್ಠಿತ ಕಂಪನಿಯ ಮೊಬೈಲ್ ಫೋನಿನ 'ಧ್ವನಿ ಸೇವಕ' (Voice Assistant), ವ್ಯಕ್ತಿಯೊಬ್ಬರ ಫೋನ್‌ನಲ್ಲಿದ್ದ 1700 ಖಾಸಗಿ ಧ್ವನಿಮುದ್ರಿಕೆಗಳನ್ನು ಬೇರೊಂದು ಗೊತ್ತು ಗುರಿ ಇಲ್ಲದ ಬೇರೊಂದು ಮೊಬೈಲಿಗೆ ವರ್ಗಾಯಿಸಿಬಿಟ್ಟಿತ್ತು.

### 5. ಸ್ಮಾರ್ಟ್ ಮನೆಗಳು

ಮೊಬೈಲ್ ಫೋನುಗಳು ಸ್ಮಾರ್ಟ್ ಆದಂತೆ ನಮ್ಮ ವಾಸದ ಮನೆಗಳೂ ಸ್ಮಾರ್ಟ್ ಆಗುತ್ತಿವೆ. ನಮ್ಮ ಆದ್ಯತೆ, ಆಯ್ಕೆ ಮತ್ತು ದಿನನಿತ್ಯದ ಹವ್ಯಾಸ–ಜೀವನ ಶೈಲಿಗಳನ್ನು ಸೂಕ್ಷ್ಮವಾಗಿ ಗ್ರಹಿಸುವ ಮನೆಯ ಹವಾನಿಯಂತ್ರಕ ವ್ಯವಸ್ಥೆಯು, ಆಫೀಸಿನ ಕೆಲಸ ಮುಗಿಸಿ ಮನೆಗೆ ಬರುವ ನಮಗೆ ಹಿತವೆನಿಸುವಷ್ಟು ಉಷ್ಣಾಂಶವಿರುವಂತೆ ನೋಡಿಕೊಳ್ಳುತ್ತದೆ. ಫ್ರಿಜ್‌ನಲ್ಲಿ ಇತಿಂಥ ಸಾಮಾನು–ತರಕಾರಿ ಖಾಲಿಯಾಗಿದೆ ಎಂದು ರೆಫ್ರಿಜರೇಟರ್‌ನಿಂದ ಮೊಬೈಲಿಗೆ ಸಂದೇಶ ಬರುತ್ತದೆ. ನಮ್ಮ ಸ್ಮಾರ್ಟ್